Regd No B G. 155

Sri

4—9—1964

48 th Year
ನೇ ವರ್ಷ
★
Sri 'Satyavadi'
— DAILY —
MYSORE 4

ಸತ್ಯವಾದಿ

ಸ್ಥಾಪಕರು— ಅರಮನೆ ಸಿಂಸ್ಥೆದಾರ್ ಎಂ ವಿ ಸುಬ್ಬಿಂರಾಯುರು [2 ನಪೈ]

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ 40 ನ ಪೈ

Protect the Cow
ಗೋಸಂರಕ್ಷಣೆ ಮಾಡಿ

ಎಸ್. ಜಿ. ಓ. ಗಳು ಸಂಬಳ ತೆಗೆದುಕೊಳ್ಳಲಿಲ್ಲ

ಬೊಂಬಾಯಿ— ಸರ್ಕಾರವು ಪೇಕ ಮಿಷನ್ನನ್ನು ರಚಿಸಲು ತಿರ್ಮಾನಿಸಿದ್ದನ್ನೂ ಸಂಬಳ ಹೆಚ್ಚಿಸಿದ್ದುದನ್ನೂ ಪ್ರತಿಭಟಿಸಿ ಮಹಾರಾಷ್ಟ್ರದ 150000 ಎಸ್ ಜಿ ಓ ಗಳು ತಮ್ಮ ಸಂಬಳ ತೆಗೆದುಕೊಳ್ಳಲು ತಿರ್ಮಾನಿಸಿರುವರು

27 ಪೈಸಾಕ್ಕಾಗಿ ಭೀಕರ ಕೊಲೆ

ಬೆಂಗಳೂರಿನ ಹೃದಯಚ್ಛೇದಕ ವಾರ್ತೆ! ಬೀದೀಲಿ ಕಡ್ಲೆಕಾಯಿ ಮಾರುವ ಶ್ರೀನಿವಾಸ ಎಂಬುವನಿಂದ 18 ವರ್ಷದ ಗೋಪಾಲನೆಂಬುವನು 27 ಪೈಸಾಕ್ಕೆ ಕಡ್ಲೆಕಾಯಿ ತೆಗೆದುಕೊಂಡು ದುಡ್ಡು ಕೊಡದೇ ಪರಾರಿಯಾಗಲು ಯತ್ನಿಸಿದನೆಂದೂ, ಆಗ ಅವನನ್ನು ಕಳ್ಳೇಕಾಯಿ ಯವನು ಚಾಕುವಿನಿಂದ ತಿವಿದನೆಂದೂ ಗೋಪಾಲನು ಕೂಡಲೇ ಮೃತನಾದನೆಂದೂ, ಶ್ರೀನಿವಾಸನು ಬಂಧಿಸಲ್ಪಟ್ಟ ಅವನ ಮೇಲೆ ಖೂನಿ ಮೊಕದ್ದಮೆ ರಿಜಿಸ್ಟರು ಮಾಡಿಕೊಳ್ಳಲಾಗಿದೆಯೆಂದೂ ವಂದಿಯಾಗಿದೆ

ಆಕ್ಷೇಪಣೆ

ನವದೆಹಲಿ— ವಿವಿಧ ಸಚಿವಾಲಯಗಳಿಗೆ ಕೊಡಲಾಗುತ್ತಿದ್ದ ಕೆಲವು ಆರ್ಥಿಕ ಅಧಿಕಾರವು ದುರುಪಯೋಗಪಡಿಸಿಕೊಳ್ಳಲಾಗುತ್ತಿದೆಯೆಂದು ಪಬ್ಲಿಕ್ ಅಕೌಂಟ್ಸು ಸಮಿತಿ ವರದಿ ತಿಳಿಸಿದೆ — ಈ ಬಗ್ಗೆ ಹೇಳಿಕೆಯನ್ನು ಸಂಬಂಧಪಟ್ಟ ಸಚಿವಾಲಯಗಳನ್ನು ಕೇಂದ್ರ ಆರ್ಥ ಸಚಿವಾಲಯ ಕೇಳಿದೆ — ಈ ವರ್ಷದಲ್ಲಿ ರೂ 75 ಕೋಟಿ ಖರ್ಚು ತಗ್ಗಿಸಲು ನಿರ್ಧರಿಸಲಾಗಿದೆ.

★

ಜನಸಂಖ್ಯೆ ಏರಿಕೆ

ವಿಶ್ವಸಂಸ್ಥೆ— ವಿಶ್ವದ ಜನಸಂಖ್ಯೆ ವರ್ಷಕ್ಕೆ 63 ಮಿಲಿಯದಷ್ಟು ಹೆಚ್ಚುತ್ತಿರುವುದಾಗಿ 1963 ರ ಡೆಮೊಗ್ರಾಫಿಕ್ ಇಯರ್ ಬುಕ್ ಪ್ರಕಟಿಸಿದೆ.

6 ತಿಂಗಳಿಂದ ಸಂಬಳವಿಲ್ಲ

ತೆನಾಲಿ— ಈ ತಾಲ್ಲೂ ಪ್ರೌಢ ವಿದ್ಯಾಶಾಲೆ ಮತ್ತು ಇದರ ಶಾಖಾ ಸಂಸ್ಥೆಯ ಉಪಾಧ್ಯಾಯರುಗಳಿಗೆ 6 ತಿಂಗಳಿಂದ ಸಂಬಳ ಕೊಟ್ಟಿಲ್ಲವಂತೆ!

ನೆಹರೂ ಚಿತ್ರ

ಜಿಲ್ಲ್ಗಾಡು — ಯುಗೊಸ್ಲಾವಿನ ಕಲಾವಿದರು ಮಿಲಿಟರಿ ವಾಜ್ಞಾವಿಕ್ ವರದ ಕೆತ್ತನೆಯ ಪಂ|| ನೆಹರೂರವರ ಚಿತ್ರವನ್ನು ಭಾರತ ರಾಯಭಾರಿ ಶ್ರೀ ಮಣಿಯವರಿಗೆ ಕೊಟ್ಟರು.

ಹುಡುಗಿಯಳ ಜೊತೆಯಲ್ಲಿ ಹುಡುಗ

ಎಡಿನ್ಬರೊ— 14 ವರ್ಷದ ಓವಕ್ ಹೋವ್ಸನು ತನ್ನ ತೊಳುದ್ದ ಬಿಳಿದೆರುವ ಕೂದಲನ್ನು ಕತ್ತರಿಕೊಳ್ಳಲು ಒಪ್ಪುವವರೆಗೆ ಅವನನ್ನು ಸ್ಕೂಲಿನಲ್ಲಿ ಹುಡುಗಿಯರ ಜೊತೆ ಕೂತು ಕಸೂತಿ ಮತ್ತು ಅಡಿಗೆ ಪಾಠ ಕಲಿಯುವಂತೆ ಹೆಡ್ಮಾಸ್ಟರು ಆಜ್ಞೆ ಮಾಡಿದ್ದಾರೆ — ಹುಡುಗ ಅಡಕ್ಕೆ ಸೈ ಎಂದಿದ್ದಾನೆ!

★

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಅಸ್ಥಾನ ಮಹಾವಿದ್ವಾ. ಧರ್ಮಾಧಿಕಾರಿ ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣ ಜೋಯಿಸರವರಿಂದ

5 ಶನಿವಾರ ಚತುರ್ದಶಿ (ಮ 11-2) ಮಖ

ಮೈಸೂರಿನಲ್ಲಿ ಕಾರ್ಡ್ ಮೂಲಕ ಸಕ್ಕರೆ

ಬೌದ್ಧ ಗುಂಪುಗಳ ಸವಾಲ್

ಸೈಗಾರ್— ಅಕ್ಟೋಬರು 27 ರೊಳಗೆ ದಕ್ಷಿಣ ವಿಯಟ್ನಾವಿನಲ್ಲಿ ಪ್ರಜಾರಾಜ್ಯ ಸ್ಥಾಪನೆಯಾಗಿ, ಎಲ್ಲಾ ಹಿಂಸಾಕೃತ್ಯಗಳೂ ನಿಲ್ಲಿಸಲ್ಪಡದಿದ್ದರೆ, ವಿದ್ಯಾರ್ಥಿಗಳ, ವರ್ತಕರ ಮುಷ್ಕರ ಎರ್ಪಡಿಸಲಾಗುವುದೆಂದು ಬೌದ್ಧ ಮತಗುಂಪುಗಳು ಬೆದರಿಕೆ ಒಡ್ಡಿದ್ದಾರೆ

★

ಇದೊಂದಾಟೆ

ಜಮ್ಮು— ಪಾಕಿಸ್ತಾನಿ ಸೈನಿಕರು ಆಕ್ರಮಿತ ಕಾಶ್ಮೀರದ ಕದನ ವಿರಾಮ ರೇಖೆಯ ಹತ್ತಿರದ ಗ್ರಾಮಗಳಿಂದ ಜನರನ್ನು ಎಂಪುಂ ಕಡೆಗೆ ಸಾಗಿಸುತ್ತಿದ್ದಾರೆಂದು ವಂದಿ ಬಂದಿದೆ.

ಪ್ರಯೋಜನವಿಲ್ಲ!

ಕಂಚಿ— ಸ್ವರ್ಣಸಿಂಗರು ಕಾಶ್ಮೀರ ವಿಷಯದಲ್ಲಿ ಭಾರತದ ನೀತಿ ಬದಲಿಲ್ಲವೆಂದು ಹೇಳುತ್ತಿರುವುದರಿಂದ ಜಯಪ್ರಕಾಶ ನಾರಾಯಣರು ಪಾಕಿಸ್ತಾನ ಮುಖಂಡರೊಡನೆ ಮಾತುಕತೆ ನಡೆಸುವುದರಿಂದ ಏನೂ ಪ್ರಯೋಜನವಿಲ್ಲವೆಂದು ರಾಜ್ಯಾಡಳಿತ ನಡೆಸುತ್ತಿರುವ ಮುಸ್ಲಿಂ ಲೀಗಿನ ನಾಯಕ ಖಾಲಿಕುಜಾಮಾ ಹೇಳಿದರು.

★

ಪ್ರವಾಹದ ಹಾವಳಿ

ಜಯಪುರ— ಘಂಟಾರಿನ ಪ್ರವಾಹದ ನೀರಿನಿಂದ 21 ಸಾವಿರ ಎಕರೆ ಬೆಳೆಯೂ 100 ಗ್ರಾಮಗಳೂ ನೀರಿನ ಪಾಲಾಗಿವೆ.

★

ನಾಳೆ ಕಡೇ ಶ್ರಾವಣ ಶನಿವಾರ ಪ್ರಯುಕ್ತ ಸತ್ಯವಾದಿ ಕಾರ್ಯಾಲಯಕ್ಕೆ ರಜವಿದೆ

ಮೈಸೂರು 3— ಗೋಧಿ, ಮೈದಾ, ರವೆಯ ಗುರ್ತು ಕಾರ್ಡಿನವಂಗೆ ಸಕ್ಕರೆ ಕೊಡುವ ಅಂಗಡಿಗಳಲ್ಲಿ ದೊರೆಯುವುದು : ಚಿಲ್ಲರೆ ಅಂಗಡಿಯವರು ಎಲ್ಲ ಸೇರಿ ಈ ದಂದಲ್ಲಿ ಮಾಲು ನಿರೀಕ್ಷಿಸಲಾಗಿದೆ— ಗೋಧಿ ಕಿಲೋಗ್ರಾಂಗೆ 42 ನ ಪೈ ; ರವೆ ಕಿಲೋಗ್ರಾಂಗೆ 66 ನ ಪೈ ; ಮೈದಾ ಪಲೋಗ್ರಾಂಗೆ 60 ನ ಪೈ ; ಅಟ್ಟಾ ಕಿಲೋಗ್ರಾಂಗೆ 47 ನ ಪೈ.

ಚಿಲ್ಲರೆಯಾಗಿ ಸಕ್ಕರೆ ಮಾರುವ ಅಂಗಡಿಗಳಿಂದ ಸಾರ್ವಜನಿಕರು ತಮ್ಮ ಸಂಬರಾಜ್ ಪಡೆಯಲು ಅನುಕೂಲಿಸುವಂತೆ ಗುರುತು ಕಾರ್ಡ್ ಪದ್ಧತಿಯನ್ನು 1—9—64 ರಿಂದ ಜಾರಿಮಾಲು ಡೆಪ್ಯೂಟಿ ಕಮಿಷನರು ಆಜ್ಞೆ ಮಾಡಿದ್ದಾರೆ : 5 ನೆ ಸೆಪ್ಟಂಬರೊಳಗೆ ಗುರುತು ಕಾರ್ಡುಗಳ ಹಂಚಿಕೆಯನ್ನು ಆಹಾರ ತಕ್ಷಸೀಲ್ದಾರರು ಏರ್ಪಡಿಸುತ್ತಾರೆ : ಕಾರ್ಡುಹೊಂದಿರುವ ಸಕ್ಕರೆಯನ್ನು ಈ ರೀತಿ ಪಡೆಯಲು ಹುಕ್ಕುಳ್ಳವರಾಗಿದ್ದಾರೆ—

1. 10 ವರ್ಷದೊಳಗಿರುವ ಮಕ್ಕಳಿಗೆ ಒಂದು ಯೂನಿಟ್ ಸಕ್ಕರೆ ಅದಕ್ಕೆ ಮೇಲ್ಪಟ್ಟವರಿಗೆ ಎಂಡು ಯೂನಿಟ್ಟು ಸಕ್ಕರೆ ತಿಂಗಳೊಂದಕ್ಕೆ ಕೊಡಲಾಗುವುದು ಒಂದು ಯೂನಿಟ್ಟು ಎಂದರೆ 350 ಗ್ರಾಂಗಳು ಎಂದು ಹಾಲಿ ನಿಗದಿ ಆಗಿದೆ.

ಗಣೇಶನ ಹಬ್ಬಕ್ಕೆ ಮತ್ತಷ್ಟು ಸಕ್ಕರೆ ಕೊಡಲಾಗುವುದು.

ಅವಿಶ್ವಾಸ !

ಅವಿಶ್ವಾಸ ನಿರ್ಣಯ ಸೋಮವಾರ ಕೇಂದ್ರ ವಿಧಾನ ಸಭೆಯಲ್ಲಿ ಚರ್ಚೆ ಆಗುವುದು.

ಸತ್ಕಾರಕೂಟಗಳು

ವಿದೇಶೀ ಪ್ರವಾಸ ಹೋಗಲಿರುವ ಪಾರ್ಲಿಮೆಂಟ್ ಸದಸ್ಯೆಯಾಗಿ ಆಯ್ಕೆಯಾಗಿರುವ ಶ್ರೀಮತಿ ಸೌಂದರಮ್ಮ ಅವರ ಗೌರವಾರ್ಥವಾಗಿ ಪೌರಸಭೆಯವರೂ ಮತ್ತು ಗಾಯಿತ್ರಿ ಟಾಕೀಸಿನವರೂ ಬುಧವಾರ ಸತ್ಕಾರಕೂಟಗಳನ್ನೇರ್ಪಡಿಸಿದ್ದರು.

ರಾಜಸ್ಥಾನ ಸರ್ಕಾರಕ್ಕೆ ಆತಂಕ

ಜಯಪುರಂ— ಪಾಕಿಸ್ತಾನದೊಡನೆ 650 ಮೈಲಿಗಳ ಗಡಿ ಹೊಂದಿರುವ ರಾಜಸ್ಥಾನ ಸರಕಾರಕ್ಕೆ ಪಾಕಿಸ್ತಾನವು ಕದನವಿರಾಮ ರೇಖೆಯನ್ನುಲ್ಲಂಘಿಸಿ ತ್ತಿರುವುದು ತುಂಬಾ ಆತಂಕ ಉಂಟುಮಾಡಿದೆ

ಮುಟ್ಟಿಗೋಲು

ನವದೆಹಲಿ— 'ಹರಾಂಕೆ ಪಾಸ್‌ಬಾತ್' ಎಂಬ ಹೆಸರಿನ ಉರ್ದು ಪುಸ್ತಕದ ಪ್ರತಿಗಳ ಮೇಲೆ ಭಾರತ ಸರಕಾರ ಮುಟ್ಟುಗೋಲು ಹಾಕಿದೆ : ಈ ಪುಸ್ತಕವನ್ನು ರಾವಲ್ಪಿಂಡಿಯ ಕಾಶ್ಮೀರ ಪಬ್ಲಿಷಿಂಗ್ ಹೌಸ್ ಪ್ರಕಟಿಸಿದೆ

ಪತ್ರಿಕಾಗೋಷ್ಠಿ

ಮೈಸೂರು ಪತ್ರಿಕೋದ್ಯೋಗಿಗಳ ಸಂಘದಲ್ಲಿ, ಹುಂಗಳವಾರ ಹೊಂಗನೂರು ರೈತರ ಮಹಾಸಭೆಯ ಕಾರ್ಯಕಲಾಪಗಳನ್ನೂ, ಮಾಡಿರುವ ನಿರ್ಣಯಗಳನ್ನೂ, ಸೂಕ್ತ ಪರಿಹಾರ ಪಡೆಯಲು ಸಂಬಂಧಿಸಿದ ಮಾನ್ಯ ಮಂತ್ರಿಗಳಲ್ಲೂ ನಿಯೋಗಹೋಗಲಿರುವ ವಿಷಯವನ್ನೂ ಪತ್ರಿಕಾಗೋಷ್ಠಿಯಲ್ಲಿ ಶ್ರೀ ಎಲ್. ವೆಂಕಟನಾರಾಣಪ್ಪನವರು ವಿವರಿಸಿ, ಪತ್ರಿಕೆಯವರ ನೆರವನ್ನು ಕೋರಿದರು.

ವಿವಾಹಮಹೋತ್ಸವ

ಖಾ || ಮಹಾಲಕ್ಷ್ಮಿ (ಮೈಸೂರಿನ ಶ್ರೀ ವಿನಾಯಕ ಪ್ರಿಂಟಿಂಗ್ ವರ್ಕ್ಸ್ ಮಾಲೀಕರು ಶ್ರೀ ವೆಂಕಟಸುಬ್ಬಯ್ಯನವರ ಪುತ್ರಿ) ಮತ್ತು ಚಿ || ಹೆಚ್. ವಿ ಸೂರ್ಯನಾರಾಯಣ ರಾವ್ (ಚಿತ್ರದುರ್ಗದ ಪ್ಲೀಡರ್ ಹೆಚ್. ಎಸ್. ವೆಂಕಟಾಚಲಯ್ಯನವರ ಪುತ್ರ) ಇವರ ವಿವಾಹಮಹೋತ್ಸವವು ಸೋಮವಾರ ವೈಭವವಾಗಿ ನೆರವೇರಿತು.

ಆಶ್ಲೀಲತೆ ಬಗ್ಗೆ ಲಂಡನ್ ಪತ್ರಿಕೋದ್ಯೋಗಿಗೆ ದಿಗ್ಬ್ರಮೆ

ಲಂಡನ್— ಭಾರತ ಸುಪ್ರೀಂ ಕೋರ್ಟು 'ಲೇಡಿ ಚಟರ್ಲೀಸ್ ಲವರ್' ಎಂಬ ಪುಸ್ತಕವು ಆಶ್ಲೀಲವೆಂದು ತೀರ್ಪಿತ್ತಿರುವುದು ನ್ಯೂಸ್ಟೇಟ್ಸ್‌ಮೆನ್ ಪತ್ರಿಕೆ ಸಮಾಲೋಚನೆ ಬರೆಯುವವನಿಗೆ ತಬ್ಬಿಬ್ಬು ಉಂಟುಮಾಡಿದೆ. ಭಾರತದ ವಶ್ವಾ ಜನರ ಕಾಮಶಾಸ್ತ್ರದ ಮತ್ತು ಕೋಕಶಾಸ್ತ್ರಗಳ ಬಗ್ಗೆ ಅವನು ತಲೆಕೆಡಿಸಿ ಕೊಂಡಿರುವಂತಿದೆ

ಎಲ್ಲಾ ಖಾಯಿಲೆಗಳಿಗೂ, ಅದರಲ್ಲೂ ಗಸೆ, ತೊನ್ನು, ವಿಷಪೂರಿ ಖಾಯಿಲೆಗಳಿಗೆ ಉತ್ತಮ ಚಿಕಿತ್ಸೆ ನಡೆಸಲಾಗುತ್ತದೆ

ಆಯುರ್ವೇದ ಶಿರೋಮಣಿ ಡಾ|| ಪಿ ಎಸ್ ನಾರಾಯಣ್, ಗೋಸೇವಕರು

320 ಬಿ 5 ನೇ ಬ್ಲಾಕ್, ಜಯನಗರ, ಬೆಂಗಳೂರು 11

ರಕ್ಷಣೆ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ವುಡ್‌ಲಾಂಡ್ ಜನಪ್ರಿಯ 2 ನೇ ವಾರ

ಶಿ ಸು

ಹೋಮಿ ವಾಡಿಯಾರವರ ಈಸ್ಟ್‌ಮೆನ್ ಕಲರಿನ

.... ಅದ್ಭುತ ಸನ್ನಿವೇಶಗಳಿಂದ ಕೂಡಿದ ಮನಮೋಹಕ ಹಿಂದಿ ಚಿತ್ರ ....

ಚಾರ್ ದರ್ವೇಶ್ Char Darvesh

ಭೂಮಿಕೆಯಲ್ಲಿ— ಫಿರೋಜ್‌ಖಾರ್ಕ್, ಸಯೀದಾ ಖಾರ್ಕ್, ನಾಜ್

[ದಿನವಹಿ 3 ಪ್ರದರ್ಶನಗಳು]

ಆಪೆರಾ— 4-9-64 ರಿಂದ

ಅತ್ಯಮೋಘ ಕನ್ನಡ ಚಿತ್ರ [ದಿನ 3 ಆಟಗಳು]

ನತಿಶಕ್ತಿ

ಪಾತ್ರಧಾರಿಗಳು— ರಾಜಕುಮಾರ್, ನಾಹುಕಾರ್ ಜಾನಕಿ, ರಾಜಮ್ಮ

SHAKTI

SUDHA

Superb Tonic

Help The ' Gorakshana'

"ಗೋರಕ್ಷಣ" ಕ್ಕೆ ಬೆಂಬಲಿಗರಾಗಿರಿ

ಕನ್ನಡನಾಡಿನಲ್ಲಿ ಗೋಂಕ್ಷಣೆ, ಪ್ರಾಣಿದಯೆ, ಶಾಕಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಮಾಸಪತ್ರಿಕೆ

' ಗೋರಕ್ಷಣ ' ಕ್ಕೆ ಸಹಾಯದ್ರವ್ಯವನ್ನೂ ಲೇಖನಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಾರ್ಷಿಕ ಚಂದಾ 50 ನ ಪೈ

ಅಭಿವಾನಿಗಳು ರೂ 10 (ಒಂದೇ ಸಾರಿ) ಸಹಾಯಕರು ರೂ 25 (ಒಂದೇ ಸಾರಿ)

ವಿಳಾಸ- ಗೋರಕ್ಷಣ ಆಫೀಸು ಚಾಮರಾಪುರಂ, ಮೈಸೂರು 4

ಚಂದಾ ಬಾಯಿದೆ ಮುಗಿದಿರುವವರು ದಯವಾಡಿ ಪಾವತಿ ಮಾಡಬೇಕಾಗಿ ವಿನಂತಿ ; ಅಭಿವಾನಿಗಳೂ, ಸಹಾಯಕರೂ ಆಗಿ ಹೆಚ್ಚೆಚ್ಚು ಮಂದಿ ಸೇರ್ಪಡೆ ನೀಡಿ ಈ ಪವಿತ್ರ ಕಾರ್ಯವು ಹೆಚ್ಚೆಚ್ಚು ಪ್ರಚಾರವಾಗಲು ಸಹಕರಿಸಬೇಕೆಂದು ವಿನಂತಿ ; ಇವರ ಹೆಸರು ಆಗಾಗ್ಗೆ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

Edited, Printed & Published by the Proprietor 'Dharma Prachara Nirata' M. S. Krishna Rao at the 'Satyavadi' Press, Chamarajapuram, Mysore 4.